# ಕರ್ನಾಟಕ ರಾಜ್ಯ ರಸ್ತೆ  ಸಾರಿಗೆ ಸಂಸ್ಥೆ ಕೇಂದ್ರ ಕಛೇರಿ : ಬೆಂಗಳೂರು

## "ಪತ್ರಿಕಾ ಪ್ರಕಟಣೆ"

****

ವಿಷಯ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಸಾರಿಗೆಗಳಲ್ಲಿ ಮುಂಗಡ ಕಾಯ್ದಿರಿಸಿ ಪ್ರಯಾಣಿಸುವ ಪ್ರಯಾಣಿಕರಿಗೆ ವಿದ್ಯುನ್ಮಾನ ಪ್ರತಿಯ(ಸಾಫ್ಟ್ ಕಾಪಿ) ಗುರುತಿನ ಚೀಟಿಯನ್ನು ಅನುಮತಿಸುತ್ತಿರುವ ಬಗ್ಗೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ತನ್ನ ಪ್ರಯಾಣಿಕರ ಪ್ರಯಾಣವನ್ನು ಸುಗಮಗೊಳಿಸಲು ಆನ್‌ಲೈನ್ ಮೂಲಕ ಮುಂಗಡ ಕಾಯ್ದಿರಿಸುವ ವ್ಯವಸ್ಥೆಯನ್ನು ಒದಗಿಸಿರುತ್ತದೆ. ಆನ್‌ಲೈನ್‌ನಲ್ಲಿ ಮುಂಗಡ ಟಿಕೇಟು ಕಾಯ್ದಿರಿಸುವ ಪ್ರಯಾಣಿಕರಿಗೆ ಭೌತಿಕ ಗುರುತಿನ ಚೀಟಿ ಅಥವಾ ಪ್ರಯಾಣಿಕರು ಡಿಜಿಲಾಕರ್ ಆಪ್ (DigiLocker App) ಮುಖಾಂತರ ಹಾಜರುಪಡಿಸುವ ಆಧಾರ್, ಪಾನ್‌ಕಾರ್ಡ್ ಹಾಗೂ ಚಾಲನಾ ಪರವಾನಗಿ ಗುರುತಿನ ಚೀಟಿ (ಸಾಫ್ಟ್ ಪ್ರತಿ) ಗಳನ್ನು ಇ–ಟಿಕೇಟ್/ಎಂ–ಟಿಕೇಟ್ ಜೊತೆಗೆ ಪ್ರಯಾಣದ ಸಮಯದಲ್ಲಿ ಅಗತ್ಯ ಪುರಾವೆಯಾಗಿ ಮಾನ್ಯ ಮಾಡಲಾಗುವುದು.

ಮುಂದುವರೆದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಸಾರಿಗೆಗಳಲ್ಲಿ ಪ್ರಯಾಣಿಸುವ ಹಿರಿಯ ನಾಗರಿಕರಿಗೂ ಟಿಕೇಟ್ ದರದಲ್ಲಿ ರಿಯಾಯಿತಿ ಪಡೆಯಲು ಭೌತಿಕ ಗುರುತಿನ ಚೀಟಿ ಅಥವಾ ಡಿಜಿಲಾಕರ್ ಆಪ್ (DigiLocker App) ಮುಖಾಂತರ ಹಾಜರುಪಡಿಸುವ ಆಧಾರ್ ಹಾಗೂ ಚಾಲನಾ ಪರವಾನಗಿ ಗುರುತಿನ ಚೀಟಿ (ಸಾಫ್ಟ್ ಪ್ರತಿ) ಗಳನ್ನು ಪ್ರಯಾಣದ ಸಮಯದಲ್ಲಿ ಅಗತ್ಯ ಪುರಾವೆಯಾಗಿ ಮಾನ್ಯ ಮಾಡಲಾಗುವುದು. ಪ್ರಯಾಣಿಕರು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಲು ಕೋರಲಾಗಿದೆ.

ಪ್ರಯಾಣಿಕರಿಗೆ ಮುಂಗಡ ಬುಕಿಂಗ್‌ನ ಯಾವುದೇ ರೀತಿಯ ವಿಚಾರಣೆಗೆ ಕರಾರಸಾನಿಗಮದ ಕಾಲ್‌ಸೆಂಟರ್ ಸಂಖ್ಯೆ 9449596666 (24 ಗಂಟೆಗಳು) ಹಾಗೂ ಅವತಾರ್ ಸೆಲ್ 7760990034/35 ಗೆ (0700–2200 ಗಂಟೆವರೆಗೆ) ಕರೆ ಮಾಡಬಹುದಾಗಿರುತ್ತದೆ.

Sub: Accepting Digital Identity Proof (DigiLocker App) in Karnataka State Road Transport Corporation services.

Karnataka State Road Transport Corporation has provided online advance reservation booking facility to make the journey of the passengers comfortable. KSRTC will accept Digital Identity Proof like Aadhar, PAN Card and Driving License (Soft Copy) shown through DigiLocker App along with e-ticket/m-ticket from advance ticket reserved passenger du ring the journey.

Further, for making the journey of Senior Citizen Passengers comfortable for availing fare discount, KSRTC will accept Digital Identity Proof like Aadhar and Driving License shown through DigiLocker App during the journey. Passengers are requested to avail this facility.

For any reservation related enquiries, please contact KSRTC Call Center 9449596666 (24x7) or AWATAR Cell 7760990034/35 (0700-2200 hours).

SD/-

**Chief Traffic Manager (Com)**